# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ 04/2018

ಅಸಾ ಃ**11**

ಚಾಸಾ ಃ21

ಸಾಕ್ಷಿದಾರರ ಹೆಸರು ಃ ಜಾಕ್ಸನ ಡಿಸೋಜಾ

ತಂದೆಯ ಹೆಸರು ಃ ರಾಬರ್ಟ

ವಯಸ್ಸು ಃ 45 ವರ್ಷ

ಉದ್ಯೋಗ ಃ ಪಿ.ಐ., ವಿದ್ಯಾನಗರ ಪೊಲೀಸ ಠಾಣೆ, ಹುಬ್ಬಳ್ಳಿ

ವಾಸ ಸ್ಥಳ ಃ ಹುಬ್ಬಳ್ಳಿ.

ದಿನಾಂಕಃ **13/11/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –**

1. ದಿನಾಂಕಃ10/04/2016 ರಿಂದ ದಿನಾಂಕಃ16/12/2017 ರವರೆಗೆ ನಾನು ಹಾವೇರಿಯ ಎಸಿಬಿ ಪೊಲೀಸ ಠಾಣೆಯ ಪಿಐ ಎಂದು ಕೆಲಸ ಮಾಡಿದ್ದೇನೆ.

2. ದಿನಾಂಕಃ09/08/2017 ರಂದು ಮಧ್ಯಾಹ್ನ ನಾನು ಠಾಣೆಯಲ್ಲಿದ್ದಾಗ 12.30 ಘಂಟೆಗೆ ಚಾಸಾ-1 ಬಸವರಾಜ ಠಾಣೆಗೆ ಬಂದು ಸಲ್ಲಿಸಿದ ಲಿಖಿತ ದೂರನ್ನು ಹಾಗೂ ಮುದ್ರಿಸಿಕೊಂಡು ತಂದ ಧ್ವನಿಮುದ್ರಣ ಇರುವ ಮೊಬೈಲ್ ಪಡೆದು, ಧ್ವನಿ ಮುದ್ರುವಣವನ್ನು ಆಲಿಸಿ, ಲಂಚ ಕೇಳಿದ್ದು ಕಂಡುಬಂದಿದ್ದರಿಂದ ಚಾಸಾ-1 ರ ದೂರನ್ನು ಪಡೆದು ನಮ್ಮ ಠಾಣೆಯ ಗುನ್ನೆ ಸಂಖ್ಯೆ 4/2017 ರಲ್ಲಿ ಪ್ರಕರಣ ನೋಂದಾಯಿಸಿಕೊಂಡೆ. ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಪ್ರ.ವ.ವರದಿಯನ್ನು ಈಗ ನಿಪಿ-42, ನನ್ನ ಸಹಿಗಳನ್ನು ನಿಪಿ-1(ಬಿ) ಮತ್ತು ನಿಪಿ-42(ಎ) ಅಂತಾ ಗುರುತಿಸಲಾಯಿತು. ನಿಪಿ-1 ಮತ್ತು 42 ನ್ನು ಲಕೋಟೆಯಲ್ಲಿಟ್ಟು ಸೀಲು ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದೆ.

3. ಬಿ.ಇ.ಓರವರಿಗೆ ಪತ್ರ ಬರೆದು ಪಂಚರನ್ನು ಕಳಿಸಿಕೊಡುವಂತೆ ಮನವಿ ಕಳಿಸಿದೆ. ಅವರು ಚಾಸಾ-2 ಮತ್ತು 3 ಪಂಚರನ್ನಾಗಿ ಕಳಿಸಿದರು. ನನ್ನ ಮತ್ತು ಚಾಸಾ-1 ರ ಪರಿಚಯ ಹಾಗೂ ಪ್ರಕರಣ ಕುರಿತು ಪಂಚರಿಗೆ ತಿಳಿಸಿದೆ. ಚಾಸಾ-1 ಹಾಜರುಮಾಡಿದ ಮೊಬೈಲನ್ನು ಪಡೆದು ಸಿಬ್ಬಂದಿ ಮೂಲಕ ಧ್ವನಿಮುದ್ರಣವನ್ನು ಲ್ಯಾಪಟ್ಯಾಪಗೆ ಅಳವಡಿಸಿ, ಆಲಿಸಿ, ಡಿವಿಡಿಯಲ್ಲಿ ಸಂಗ್ರಹಿಸಿ ಆರ್ಟಿಕಲ್ ಸಂಖ್ಯೆ-

1 ಎಂದು ಗುರುತಿಸಿ ಸೀಲು ಮಾಡಿದೆ. ಸಂಭಾಷಣೆಯನ್ನು ಚಾಸಾ-13 ಸಿಬ್ಬಂದಿ ಮೂಲಕ ನಿಪಿ-2 ಪಂಚನಾಮೆಯ ಪುಟ ಸಂಖ್ಯೆ 3 ಮತ್ತು 4 ರಲ್ಲಿ ಪಠ್ಯ ರೂಪದಲ್ಲಿ ತಯಾರಿಸಿದೆ. ಆರ್ಟಿಕಲ್ ಸಂಖ್ಯೆ-2 ಎಂದು ಗುರುತಿಸಲಾದ ನಿಪಿ-6 - 2 ನೇ ಆರೋಪಿಯ ಧ್ವನಿಮುದ್ರಣದ ಡಿವಿಡಿಯಲ್ಲಿಯ ಪಠ್ಯವನ್ನು ನಿಪಿ-2 ಪಂಚನಾಮೆಯ ಪುಟ ಸಂಖ್ಯೆ 5 ರಿಂದ 8 ರಲ್ಲಿ ಪಠ್ಯ ರೂಪದಲ್ಲಿ ತಯಾರಿಸಿದೆ.

4. ಚಾಸಾ-1 ಲಂಚ ನೀಡಲು ತಂದ ರೂ.2,000/-ರ 1 ನೋಟು ಮತ್ತು ರೂ.500/- ರ 4 ನೋಟುಗಳನ್ನು ಒಟ್ಟು ರೂ.4,000/- ಗಳ ಮೇಲೆ ಇರುವ ಸಂಖ್ಯೆ ನಮೂದು ಮಾಡುವಂತೆ ಪಂಚರಿಗೆ ತಿಳಿಸಿ, ಬರೆಯಿಸಿದೆ. ಸದರಿ ದಾಖಲೆಗಳನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದೆ. ಪಿನಾಫ್ತಲಿನ್ ಪೌಡರ ಮತ್ತು ಸೋಡಿಯಂ ಕಾರ್ಬೋನೇಟ್ ಗಳ ಪರಿಣಾಮ ಕುರಿತು ಸಿಬ್ಬಂದಿ ಮೂಲಕ ಪಂಚರಿಗೆ ವಿವರಿಸಿದೆ. ಚಾಸಾ-1 ಹಾಜರುಮಾಡಿದ ನೋಟುಗಳ ಎರಡೂ ಬದಿಗೆ ಚಾಸಾ-10 ಸಿಬ್ಬಂದಿಯ ಮೂಲಕ ಪಿನಾಫ್ತಲಿನ್ ಪೌಡರ ಸವರಿಸಿದೆ. ಚಾಸಾ-12 ರ ಮೂಲಕ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿದೆ. ಚಾಸಾ-3 ರ ಮೂಲಕ ಚಾಸಾ-1 ರ ಅಂಗ ಶೋಧನೆ ಮಾಡಿಸಿದೆ. ಚಾಸಾ-1 ರ ಸ್ವಾಧೀನದಲ್ಲಿ ಎರಡು ಮೊಬೈಲುಗಳು, ಒಂದು ಕರ್ಚಿಫ್ ಮಾತ್ರ ಇವೆ ಎಂದು ತಿಳಿದುಕೊಂಡು ಲಂಚದ ಹಣವನ್ನು ಚಾಸಾ-3 ರ ಮೂಲಕ ಚಾಸಾ-1 ರ ಶರ್ಟಿನ ಖಾಲಿ ಜೇಬಿನಲ್ಲಿ ಇರಿಸಿದೆ.

5. ತಯಾರಿಸಲಾದ ಮಾದರಿ ದ್ರಾವಣವನ್ನು ಆರ್ಟಿಕಲ್ ಸಂಖ್ಯೆ -3 ಎಂದು ಗುರುತಿಸಿದೆ. ಈಗಾಗಲೇ ಅದನ್ನು ಮುಮಾ-1 ಎಂದು ಗುರುತಿಸಲಾಗಿದೆ. ಉಳಿದ ದ್ರಾವಣದಿಂದ ಚಾಸಾ-3 ರ ಕೈಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದ ಮೂಲಕ ತೊಳೆಯಿಸಿ, ನಂತರ ತಿಳಿಗುಲಾಬಿ ಬಣ್ಣಕ್ಕೆ ತಿರುಗಿದ್ದು (ಇನ್ನು ಮುಂದೆ ಬಣ್ಣ ಬದಲಾಯಿತು ಎಂದು ಕರೆಯಲಾಗಿದೆ.), ಪಂಚರಿಗೆ ತಿಳಿಸಿದೆ. ಸದರಿ ದ್ರಾವಣವನ್ನು ಬಾಟಲನಲ್ಲಿ ಸಂಗ್ರಹಿಸಿ ಸೀಲು ಮಾಡಲಾಯಿತು. ಈಗ ತೋರಿಸಿದ ಮುಮಾ-2 (ಆರ್ಟಿಕಲ್ ಸಂಖ್ಯೆ-4) ಅದೇ ಇರುತ್ತದೆ. ನಿಪಿ-2 ಪಂಚನಾಮೆ ತಯಾರಿಸಿದೆ. ನನ್ನ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

6. ಚಾಸಾ-2 ರೊಂದಿಗೆ ಆರೋಪಿ ಕಾರ್ಯಾಲಯಕ್ಕೆ ಹೋಗಿ, ಆರೋಪಿ ಲಂಚ ಕೇಳಿದಾಗ ಮಾತ್ರ ಕೊಟ್ಟು, ಹೊರಗೆ ಬಂದು ಕರವಸ್ತ್ರದಿಂದ ತನ್ನ ಮುಖ ಸವರಿಕೊಳ್ಳುವ ಮೂಲಕ ಸಂಜ್ಞೆ ನೀಡುವಂತೆ ಚಾಸಾ-1 ರಿಗೆ ತಿಳಿಸಿದೆ. ಸಂಜೆ 4.30 ಘಂಟೆಗೆ ಚಾಸಾ-12 ಬೈಕ ಮೂಲಕ ಹೋದರು. ಸಿಬ್ಬಂದಿ ಮತ್ತು ದಾಳಿ ತಂಡ ಸಹಿತ 1 ನೇ ಆರೋಪಿಯ ಕಾರ್ಯಾಲಯಕ್ಕೆ ಹೋಗುವಂತೆ ಚಾಸಾ-16 ಪಿಐ ರವರಿಗೆ ತಿಳಿಸಿದೆ. ನಾನು ತಿಳಿಸಿದಾಗ ಸದರಿ ಆರೋಪಿಯನ್ನು ಕರೆದುಕೊಂಡು ಬರುವಂತೆ ಅವರಿಗೆ ತಿಳಿಸಿದೆ. ನಾನು, ಚಾಸಾ-1 ರಿಂದ 3 ಮತ್ತು ಸಿಬ್ಬಂದಿ ಸೇರಿ ಬಂಕಾಪುರಕ್ಕೆ ಹೋದೆವು. ನಾವು ಬಂಕಾರಪುರದ ಹೊರಭಾಗದಲ್ಲಿ ಉಳಿದು ಬೈಕ ಮೂಲಕ ಚಾಸಾ-1 ಮತ್ತು 2 ರನ್ನು ಆರೋಪಿ ಹತ್ತಿರ ಕಳಿಸಿದೆ. ನಾನು ಮತ್ತು ಇತರರು ಅವರನ್ನು ಹಿಂಬಾಲಿಸಿದೆವು.

*(ಈ ಹಂತದಲ್ಲಿ ಸಾಕ್ಷಿಯ ವೈಯಕ್ತಿಕ ಕಾರಣದ ವಿನಂತಿ ಮೇರೆಗೆ ಮುಂದೂಡಲಾಯಿತು.)*

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.

**(**ದಿನಾಂಕಃ ***13/11/2025*** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.*)*

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –**

7. ಈ ಮೇಲೆ ಹೇಳಿದ ಆರೋಪಿ ಮನೆ ಹತ್ತಿರ ಸ್ವಲ್ಪ ದೂರದಲ್ಲಿ ನಿಂತು ಗಮನಿಸಿಸುತ್ತಿದ್ದೆವು. ಆಗ ಸಂಜೆ 5.35 ಘಂಟೆಯಾಗಿತ್ತು. ಸಂಜೆ 5.55 ಕ್ಕೆ ಚಾಸಾ-1 ಮತ್ತು 2 ಹಾಗೂ 2 ನೇ ಆರೋಪಿ ಮನೆಯಿಂದ ಹೊರಗೆ ಬಂದರು. ಚಾಸಾ-1 ನಾವು ತಿಳಿಸಿಕೊಟ್ಟಂತಹ ಸನ್ನೆ ಮಾಡಿದ. 2 ನೇ ಆರೋಪಿ ತನ್ನ ಬೈಕ ಮೂಲಕ ಹೊರಗೆ ಹೋದ. ನಾವು ಚಾಸಾ-1 ಮತ್ತು 2 ರ ಹತ್ತಿರ ಹೋಗಿ ವಿಚಾರಿಸಿದಾಗ ತನಗೆ ದುಡ್ಡು ಕೊಡುವುದು ಬೇಡ ಮೇಲಾಧಿಕಾರಿಯಾದ 1 ನೇ ಆರೋಪಿಗೆ ಕೊಡತಕ್ಕದ್ದು ಎಂದು 2 ನೇ ಆರೋಪಿ ತಿಳಿಸಿದ್ದಾಗಿ ಸದರಿ ಸಂಭಾಷಣೆಯನ್ನು ಧ್ವನಿ ಮುದ್ರಣದಲ್ಲಿ ಮುದ್ರಿಸಿಕೊಂಡಿದ್ದಾಗಿ ತಿಳಿಸಿದರು. ಆದಾಗ್ಯೂ ಕಟ್ಟಿಗೆಯ ಟೇಬಲ್ ತೋರಿಸಿ ಹಣ ಅಲ್ಲಿಡುವಂತೆ 2 ನೇ ಆರೋಪಿ ತಿಳಿಸಿದ್ದಾಗಿ, ಅದರಂತೆ ತಾನು ಅಲ್ಲಿ ಹಣ ಇಟ್ಟಿದ್ದಾಗಿ ಚಾಸಾ-1 ತಿಳಿಸಿದರು. ಚಾಸಾ-1 ರು 2 ನೇ ಆರೋಪಿಗೆ ಪೋನ ಮೂಲಕ ಸಂಪರ್ಕಿಸಿ ವಿಚಾರಿಸಿದಾಗ ಸದರಿ ಆರೋಪಿ ಕಾರ್ಯಾಲಯದಲ್ಲಿ ಇದ್ದುದು ಗೊತ್ತಾಯಿತು. ನಾವು ಬಂಕಾಪುರದ ವಿದ್ಯುತ್ ಶಾಖಾ ಕಛೇರಿಗೆ ಹೋದೆವು. ಆಗ ಸಂಜೆ 6.15 ಘಂಟೆಯಾಗಿತ್ತು.

8. ಕಾರ್ಯಾಲಯದ ಹತ್ತಿರ ಗ್ರಿಡ್ ಪಕ್ಕ ನಿಂತ 2 ನೇ ಆರೋಪಿಗೆ ತಮ್ಮ ಪರಿಚಯ ಹಾಗೂ ಚಾಸಾ-1 ಕೊಟ್ಟ ದೂರಿನ ಬಗ್ಗೆ ತಿಳಿಸಿ ಅವರ ಕಾರ್ಯಾಲಯಕ್ಕೆ ಕರೆದುಕೊಂಡು ಹೋದೆವು. ದುಡ್ಡು ತನ್ನ ಹತ್ತಿರ ಇಲ್ಲ ಅಂತಾ ಸದರಿ ಆರೋಪಿ ತಿಳಿಸಿದ. ನಂತರ ದುಡ್ಡು ತನ್ನ ಮನೆಯ ಟೇಬಲ್ ನಲ್ಲಿ ಇದೆ ಎಂದು ತಿಳಿಸಿದ. 2 ನೇ ಆರೋಪಿಯನ್ನು ದಸ್ತಗಿರಿ ಮಾಡಿದೆ. ಚಾಸಾ-12 ರ ಮೂಲಕ ಸೋಡಿಯಂ ಕಾರ್ಬೊನೇಟ್ ದ್ರಾವಣ ತಯಾರಿಸಿ, ಸ್ಯಾಂಪಲ್ ಸಂಗ್ರಹಿಸಿ ಆರ್ಟಿಕಲ್ ಸಂಖ್ಯೆ-5 ಎಂದು ಗುರುತಿಸಿದೆ. ಈಗಾಗಲೇ ಅದನ್ನು ಮುಮಾ-4 ಎಂದು ಗುರುತಿಸಲಾಗಿದೆ.

9. 2 ನೇ ಆರೋಪಿಯ ಬಲಗೈ ಹಾಗೂ ಎಡಗೈ ತೊಳೆದು ದ್ರಾವಣ ಸಂಗ್ರಹಿಸಿದೆ. ದ್ರಾವಣದ ಬಣ್ಣ ಬದಲಾಗಲಿಲ್ಲ. ಅವುಗಳನ್ನು ಆರ್ಟಿಕಲ್ ಸಂಖ್ಯೆ-6 ಮತ್ತು 7 ಎಂದು ಗುರುತಿಸಿದೆ.

ಈಗಾಗಲೇ ಅವುಗಳನ್ನು ಕ್ರಮವಾಗಿ ಮುಮಾ-3 ಮತ್ತು 5 ಎಂದು ಗುರುತಿಸಲಾಗಿದೆ. 2 ನೇ ಆರೋಪಿಯನ್ನು ಕರೆದುಕೊಂಡು ಅವರ ಮನೆಗೆ ಹೋಗಿ, 2 ನೇ ಆರೋಪಿ ತನ್ನ ಮನೆಯ ಹಾಲ್ ನಲ್ಲಿದ್ದ ಟೇಬಲ್ ಮೇಲೆ ಇರುವ ಪ್ಲಾಸ್ಟಿಕ್ ಚೀಲದ ಕೆಳಗೆ ದುಡ್ಡು ಇದೆ ಎಂದು ತೋರಿಸಿದ. ಸದರಿ ಹಣವನ್ನು ಪಡೆದು ಪರಿಶೀಲಿಸಿದಾಗ, ಚಾಸಾ-1 ನಮ್ಮ ಮುಂದೆ ಹಾಜರುಮಾಡಿದ ಹಣ ಇದ್ದುದಾಗಿ ಗೊತ್ತಾಯಿತು. ಸದರಿ ದುಡ್ಡನ್ನು ಜಪ್ತಿಮಾಡಿ ಸೀಲು ಮಾಡಿ ಆರ್ಟಿಕಲ್ ಸಂಖ್ಯೆ-8 ಎಂದು ಗುರುತಿಸಿದೆ. ಈಗಾಗಲೇ ಸದರಿ ಹಣವನ್ನು ಮತ್ತು ಫೋಟೋಗಳನ್ನು ಮುಮಾ-11 ಹಾಗೂ ನಿಪಿ-7 ಎಂದು ಗುರುತಿಸಲಾಗಿದೆ.

10. ಪುನಃ ಮೇಲೆ ಹೇಳಿದಂತೆ ದ್ರಾವಣ ತಯಾರಿಸಿ ಮಾದರಿ ಪಡೆದು, ಆರ್ಟಿಕಲ್ ಸಂಖ್ಯೆ-9 ಎಂದು ಗುರುತಿಸಿದೆ. ಹತ್ತಿ ತುಂಡನ್ನು ಮಾದರಿಗಾಗಿ ಪಡೆದು ಆರ್ಟಿಕಲ್ ಸಂಖ್ಯೆ-10 ಎಂದು ಗುರುತಿಸಿದೆ. ಉಳಿದ ಹತ್ತಿ ತುಂಡಿನಿಂದ ಹಣ ಇಟ್ಟ ಟೇಬಲ್ ನ ಜಾಗೆಗೆ ಸವರಿ, ಸದರಿ ಹತ್ತಿಯನ್ನು ಉಳಿದ ದ್ರಾವಣದಿಂದ ತೊಳೆಯಲಾಯಿತು. ದ್ರಾವಣದ ಬಣ್ಣ ಬದಲಾಯಿತು. ಸದರಿ ದ್ರಾವಣವನ್ನು ಆರ್ಟಿಕಲ್ ಸಂಖ್ಯೆ-11 ಎಂದು ಗುರುತಿಸಿದೆ. ಉಪಯೋಗಿಸಿದ ಹತ್ತಿಯನ್ನು ಸೀಲು ಮಾಡಿ ಆರ್ಟಿಕಲ್ ಸಂಖ್ಯೆ-12 ಎಂದು ಗುರುತಿಸಿದೆ. ಹಣ ಮುಚ್ಚಲು ಉಪಯೋಗಿಸಿದ ಪ್ಲಾಸ್ಟಿಕ್ ಕ್ಯಾರಿಬ್ಯಾಗನ್ನು ಆರ್ಟಿಕಲ್ ಸಂಖ್ಯೆ-13 ಎಂದು ಗುರುತಿಸಿದೆ. ಸದರಿ ಜಾಗೆಯ ಕಚ್ಚಾ ನಕ್ಷೆ ತಯಾರಿಸಿದೆ. ರಾತ್ರಿ 8.10 ಘಂಟೆಗೆ ಅಲ್ಲಿಂದ ಹೊರಟು ಮೇಲೆ ಹೇಳಿದ ಆರೋಪಿ ಕಾರ್ಯಾಲಯಕ್ಕೆ ಹೋದೆವು.

11. ಚಾಸಾ-16 1 ನೇ ಆರೋಪಿಯನ್ನು ಕರೆದುಕೊಂಡು ಬಂದರು. ಸದರಿ ಆರೋಪಿಗಳನ್ನು ವಿಚಾರಿಸಿ ದಸ್ತಗಿರಿ ಮಾಡಿ ನಿಯಮ ಪಾಲಿಸಿದೆ. 1 ಮತ್ತು 2 ನೇ ಆರೋಪಿಗಳ ಸ್ವಖುಷಿ ಹೇಳಿಕೆ ಪಡೆದೆ. ಚಾಸಾ-1 ಮತ್ತು 2 ಒಂದೇ ರೀತಿಯ ಹೇಳಿಕೆ ನೀಡಿ, ಆರೋಪಿಗಳು ನೀಡಿದ ಹೇಳಿಕೆ ಸರಿಯಲ್ಲವೆಂದು ಸಹ ಹೇಳಿರುತ್ತಾರೆ. ನಾನು ಆ ದಿನ ತಯಾರಿಸಿದ ನಕ್ಷೆಯನ್ನು ಈಗ ನಿಪಿ-43, ನನ್ನ ಸಹಿಯನ್ನು ನಿಪಿ-43(ಎ) ಎಂದು ಗುರುತಿಸಲಾಯಿತು. ಚಾಸಾ-6 1 ಮತ್ತು 2 ನೇ ಆರೋಪಿತರ ಮೇಲಾಧಿಕಾರಿಯಾಗಿದ್ದು ಆರೋಪಿತರ ಕಾರ್ಯಾಲಯಕ್ಕೆ ಬಂದರು. ಟ್ರ್ಯಾಪ್ ಪೂರ್ವದ ಸಂಭಾಷಣೆ ಆಲಿಸಿ ಅದರಲ್ಲಿ 1 ನೇ ಆರೋಪಿ ಧ್ವನಿ ಇದೆ ಎಂದು ಗುರುತಿಸಿದರು.

12. ಓರ್ವ ಹೀರಾಸಿಂಗ ಕೊಪ್ಪಣ್ಣ ಎನ್ನುವ 2 ನೇ ಆರೊಪಿಯ ಸಹೋದ್ಯೋಗಿ 2 ನೇ ಆರೋಪಿಯ ಟ್ರ್ಯಾಪ್ ಪೂರ್ವದ ಹಾಗೂ ಲಂಚ ಪಡೆಯುವ ಕಾಲದ ಧ್ವನಿ ಮುದ್ರಣಗಳನ್ನು ಆಲಿಸಿ, ಧ್ವನಿ ಗುರುತಿಸಿದರು. ಚಾಸಾ-13 ರ ಮೂಲಕ ಲಂಚ ಪಡೆಯುವ ಕಾಲದ ಧ್ವನಿ ಮುದ್ರಣದ ಪತ್ಯ ತಯಾರಿಸಿದೆ. ಲಂಚ ಪಡೆಯುವ ಕಾಲದ ಧ್ವನಿ ಮುದ್ರಣವನ್ನು ಲ್ಯಾಪಟ್ಯಾಪಗೆ ಅಳವಡಿಸಿ ಡಿವಿಡಿಯಲ್ಲಿ ಸಂಗ್ರಹಿಸಿ ಆರ್ಟಿಕಲ್ ಸಂಖ್ಯೆ-14 ಎಂದು ಗುರುತಿಸಿದೆ. ಈಗಾಗಲೇ ಅದನ್ನು ಮುಮಾ-12 ಎಂದು ಗುರುತಿಸಲಾಗಿದೆ.

13. ಚಾಸಾ-6 ಚಾಸಾ-1 ರ ಕುರಿತ ಕೆಲಸದ ದಾಖಲೆಗಳನ್ನು ಹಾಜರುಮಾಡಿದರು. ಅವುಗಳನ್ನು ಈಗಾಗಲೇ ನಿಪಿ-18 ರಿಂದ 35 ಎಂದು ಗುರುತಿಸಲಾಗಿದೆ. ಗುನ್ಹೆ ಜಾಗೆಗೆ ಬಂದು ಪರಿಶೀಲಿಸಿ ನಕ್ಷೆ ತಯಾರಿಸಿಕೊಡುವಂತೆ ಚಾಸಾ-8 ರ ಕಾರ್ಯಾಲಯಕ್ಕೆ ಮನವಿ ಸಲ್ಲಿಸಿ, ಅವರು ಬಂದು ಚಾಸಾ-2 ತೋರಿಸಿದ 2 ನೇ ಆರೋಪಿ ಮನೆಯಲ್ಲಿಯ ಹಾಗೂ ಸದರಿ ಆರೋಪಿಯನ್ನು ದಸ್ತಗಿರಿ ಮಾಡಿದ ಜಾಗೆಯನ್ನು ಪರಿಶೀಲಿಸಿಕೊಂಡು ಹೋದರು. ದಿನಾಂಕಃ10/08/2017 ರ ಬೆಳಗಿನ ಜಾವ 2.00 ಘಂಟೆಯವರೆಗೆ ಪಂಚನಾಮೆ ತಯಾರಿಸಲಾಯಿತು. ತನಿಖೆ ಕಾಲಕ್ಕೆ ಪೋಟೋ ಪಡೆಯಲಾಯಿತು.

14. ಚಾಸಾ-2, 3, 6, ನಾನು ಮತ್ತು ಇತರರು ಚಾಸಾ-1 ರ ಜಮೀನಿಗೆ ಭೇಟಿನೀಡಿ ಪರಿಶೀಲಿಸಿದೆವು. ಚಾಸಾ-1 ರ ಜಮೀನಿನ ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ ಎಂದು ಗೊತ್ತಾಯಿತು. ಮರುದಿನ ಬೆಳಿಗ್ಗೆ 11.45 ಕ್ಕೆ ಚಾಸಾ-2, 3 ಮತ್ತು ಇತರರೊಂದಿಗೆ ಚಾಸಾ-1 ರ ಜಮೀನಿಗೆ ಹೋಗಿ, ಪಂಚನಾಮೆ ಮತ್ತು ಕಚ್ಚಾ ನಕ್ಷೆ ತಯಾರಿಸಿ, ಪೋಟೋ ಪಡೆದೆ. ಠಾಣೆಗೆ ಹಿಂದಿರುಗಿದೆ. ಚಾಸಾ-15 ನನ್ನ ಸಿಬ್ಬಂದಿ ತನಿಖೆಯ ಕಾಲದ ಪೋಟೋಗಳನ್ನು ಅಚ್ಚು ಹಾಕಿಸಿ ತಂದು ಹಾಜರುಮಾಡಿದ್ದು, ಅವುಗಳನ್ನು ಸಂಗ್ರಹಿಸಿದೆ. ಚಾಸಾ-1 ರ ಮರು ಹೇಳಿಕೆ ಪಡೆದೆ. ಚಾಸಾ-2, 3, 9, 10, 12, 13 ಮತ್ತು 16 ರ ಹೇಳಿಕೆ ಪಡೆದೆ. ಚಾಸಾ-11 ನೀಡಿದ ಭಾ.ಸಾ.ಅ. ಕಲಂ.65(ಬಿ) ಅಡಿಯಲ್ಲಿನ ಪ್ರಮಾಣ ಪತ್ರವನ್ನು ಪಡೆದೆ.

15. ಚಾಸಾ-1 ರ ಕಾಮಗಾರಿ ಕುರಿತು ವರದಿ ನೀಡುವಂತೆ ಚಾಸಾ-6 ರಿಗೆ ಮನವಿ ಸಲ್ಲಿಸಿದೆ. ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ, ಲಕೋಟೆಯನ್ನು ತೆರೆಯಲು ಹಾಗೂ ಹೆಚ್ಚಿನ ಕಲಂ ಗಳನ್ನು ಅಳವಡಿಸಿಕೊಳ್ಳಲು ಕೇಳಿಕೊಂಡೆ. ಸ್ವತ್ತುಪಟ್ಟಿ ಸಲ್ಲಿಸಿ ಆದೇಶ ಪಡೆದೆ. ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದೆ. ಚಾಸಾ-2 ಮತ್ತು 3 ರಿಗೆ ಹಾಜರಾತಿ ಪ್ರಮಾಣ ಪತ್ರ ನೀಡಿದೆ.

16. ದಿನಾಂಕಃ11/08/2017 ರಂದು ಚಾಸಾ-4, 5 ಮತ್ತು 7 ರ ಹೇಳಿಕೆ ಪಡೆದೆ. ಚಾಸಾ-6 ರ ಹೇಳಿಕೆ ಪಡೆದೆ. ಚಾಸಾ-8 ತಯಾರಿಸಿ ತಂದು ಹಾಜರುಮಾಡಿದ ನಕ್ಷೆಯನ್ನು ಪಡೆದು ಅವರ ಹೇಳಿಕೆಯನ್ನು ಪಡೆದೆ. ಚಾಸಾ-6 ನೀಡಿದ ಕಾಮಗಾರಿ ವರದಿ ಪಡೆದೆ. ದಿನಾಂಕಃ14/08/2017 ರಂದು ಚಾಸಾ-1 ರ ಜಮೀನಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಕೋರಿ ಚಾಸಾ-6 ರಿಗೆ ಮನವಿ ಸಲ್ಲಿಸಿದೆ.

17. ಚಾಸಾ-1 ಮತ್ತು 2 ನೇ ಆರೋಪಿಯ ಮೊಬೈಲ್ ನ ಸಿಡಿಆರ್ ಮತ್ತು ಎಸ್.ಡಿ.ಆರ್ ನೀಡುವಂತೆ ದಿನಾಂಕಃ19/08/2017 ರಂದು ಅಪರ ಪೊಲೀಸ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹದಳ, ಬೆಂಗಳೂರುರವರಿಗೆ ಕೋರಿದೆ. 1 ಮತ್ತು 2 ನೇ ಆರೋಪಿತರ ಸೇವಾ ಮಾಹಿತಿ ನೀಡುವಂತೆ ಚಾಸಾ-19 ರಿಗೆ ವಿನಂತಿಸಿಕೊಂಡೆ. 2 ನೇ ಆರೋಪಿಯ ಮನೆಯ ಹಾಗೂ ಕಾರ್ಯಾಲಯಕ್ಕೆ ಇದ್ದ ವಿದ್ಯುತ್ ಪೂರೈಕೆ ಕುರಿತು ವಿವರ ನೀಡುವಂತೆ ಚಾಸಾ-6 ರಿಗೆ ವಿನಂತಿಸಿಕೊಂಡೆ.

ದಿನಾಂಕಃ21/08/2017 ರಂದು ಚಾಸಾ-19 ನೀಡಿದ 1 ಮತ್ತು 2 ನೇ ಆರೋಪಿತರ ಸೇವಾ ವಿವರ ಪಡೆದೆ. 1 ಮತ್ತು 2 ನೇ ಆರೋಪಿತರ ಸೇವಾ ವಿವರಗಳನ್ನು ನಿಪಿ-44 ಮತ್ತು 45 ಹಾಗೂ ನಾನು ಚಾಸಾ-19 ರಿಗೆ ಬರೆದ ಮನವಿಯನ್ನು ನಿಪಿ-46 ಎಂದು ಗುರುತಿಸಲಾಯಿತು. ದಿನಾಂಕಃ27/08/2017 ರಂದು ಚಾಸಾ-15 ರ ಹೇಳಿಕೆ ಪಡೆದೆ.

18. ದಿನಾಂಕಃ24/08/2017 ರಂದು ಚಾಸಾ-6 ನೀಡಿದ 2 ನೇ ಆರೋಪಿಯ ಮನೆ ಹಾಗೂ ಕಾರ್ಯಾಲಯಕ್ಕೆ ಇದ್ದ ವಿದ್ಯುತ್ ಪೂರೈಕೆ ಇದ್ದ ಕುರಿತು ದಾಖಲೆ ಸಂಗ್ರಹಿಸಿದೆ. ಸಂಗ್ರಹಿಸಿದ ವಸ್ತುಗಳನ್ನು ಪರೀಕ್ಷಿಸಿ ವರದಿ ನೀಡುವಂತೆ ಕೋರಿ ಧಾರವಾಡದ ತಜ್ಞರಿಗೆ ಮೇಲಾಧಿಕಾರಿಗಳ ಮೂಲಕ ಕಳಿಸಿಕೊಟ್ಟೆ. ನನ್ನ ಮನವಿಯನ್ನು ಈಗ ನಿಪಿ-47 ಎಂದು ಗುರುತಿಸಲಾಯಿತು. ನಾನು ತರಬೇತಿ ಕುರಿತು ಹೋದುದರಿಂದ ಕಡತವನ್ನು ಮುಂದಿನ ತನಿಖೆ ಕುರಿತು ಚಾಸಾ-20 ರಿಗೆ ವರ್ಗಾಯಿಸಿದೆ.

19. ದಿನಾಂಕಃ19/09/2017 ರಂದು ಪುನಃ ಕಡತವನ್ನು ಪಡೆದೆ. ದಿನಾಂಕಃ26/09/2017 ರಂದು ಚಾಸಾ-1 ರ ಎರಡು ಜಮೀನುಗಳ ಆರ್.ಟಿ.ಸಿ. ಹಾಗೂ ಹಕ್ಕು ವರ್ಗಾವಣೆ ಕುರಿತು ದಾಖಲೆ ನೀಡುವಂತೆ ತಹಶೀಲ್ದಾರರಿಗೆ ಮನವಿ ಸಲ್ಲಿಸಿದೆ. ಅದೇ ದಿನ ಅವರು ಪೂರೈಸಿದ ದಾಖಲೆಗಳನ್ನು ಸಂಗ್ರಹಿಸಿದೆ. ದಿನಾಂಕಃ28/09/2017 ರಂದು 2 ನೇ ಅರೋಪಿಯ ಮನೆಯ ಉತಾರು ನೀಡುವಂತೆ ಬಂಕಾಪುರದ ಪುರಸಭೆ ಮುಖ್ಯಅಧಿಕಾರಿಗಳಿಗೆ ವಿನಂತಿಸಿಕೊಂಡು, ಅವರು ನೀಡಿದ ದಾಖಲೆ ಸಂಗ್ರಹಿಸಿದೆ. ನನ್ನ ಮನವಿಯನ್ನು ಈಗ ನಿಪಿ-48 ಎಂದು ಗುರುತಿಸಲಾಯಿತು. ಮುಖ್ಯಅಧಿಕಾರಿಗಳ ಪತ್ರವನ್ನು ನಿಪಿ-49 ಮತ್ತು ಉತಾರನ್ನು ನಿಪಿ-50 ಎಂದು ಗುರುತಿಸಲಾಯಿತು.

20. ಆರೋಪಿಗಳ ಮಾದರಿ ಧ್ವನಿ ಪಡೆಯಲು ಮನವಿ ಸಲ್ಲಿಸಿ, ಪರವಾನಿಗೆ ಪಡೆದೆ. ತನಿಖೆ ಕುರಿತು ದಿನಾಂಕಃ13/10/2017 ರಂದು ನಮ್ಮ ಕಾರ್ಯಾಲಯಕ್ಕೆ ಚಾಸಾ-2 ಮತ್ತು 3 ರನ್ನು ಕಳಿಸಿಕೊಡುವಂತೆ ಬಿ.ಇ.ಓ.ರವರಿಗೆ ವಿನಂತಿಸಿಕೊಂಡೆ. ಪಂಚರಿಗೆ ಹಾಗೂ 1 ಮತ್ತು 2 ನೇ ಆರೋಪಿತರಿಗೆ ನೋಟೀಸು ಕೊಟ್ಟೆ. ದಿನಾಂಕಃ13/10/2017 ರಂದು ಚಾಸಾ-1 ಹಾಗೂ 1 ಮತ್ತು 2 ನೇ ಆರೋಪಿತರ ಮಾದರಿ ಧ್ವನಿ ಸಂಗ್ರಹಿಸಿ, ಅವುಗಳಿಗೆ ಆರ್ಟಿಕಲ್ ಸಂಖ್ಯೆ-15 ರಿಂದ 17 ಎಂದು ಗುರುತಿಸಿದೆ. ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ-11, 12 ಮತ್ತು 10 ಎಂದು ಗುರುತಿಸಲಾಗಿದೆ. ಮಾದರಿ ಧ್ವನಿ ಸಂಗ್ರಹ ಪಂಚನಾಮೆಯನ್ನು ಈಗ ನಿಪಿ-51, ನನ್ನ ಸಹಿಯನ್ನು ನಿಪಿ-51(ಎ) ಎಂದು ಗುರುತಿಸಲಾಯಿತು. ಸ್ವತ್ತುಪಟ್ಟಿ ಸಲ್ಲಿಸಿದೆ.

21. ಚಾಸಾ-1 ರಿಂದ 3, 11 ಮತ್ತು 12 ರ ಹೇಳಿಕೆ ಪಡೆದೆ. ಚಾಸಾ-12 ನೀಡಿದ ಭಾ.ಸಾ.ಅ. ಕಲಂ.65(ಬಿ) ಅಡಿಯಲ್ಲಿನ ಪ್ರಮಾಣ ಪತ್ರವನ್ನು ಪಡೆದೆ. ದಿನಾಂಕಃ22/10/2017 ರಂದು ಜಪ್ತಿಮಾಡಲಾದ ಡಿವಿಡಿಗಳನ್ನು ಪರೀಕ್ಷೆ ಕುರಿತು ಬೆಂಗಳೂರಿನ ತಜ್ಞರಿಗೆ ಚಾಸಾ-10 ರ ಮೂಲಕ ಕಳಿಸಿದೆ. ನಂತರ ಅವರು ತಂದು ಸಲ್ಲಿಸಿದ ಸ್ವೀಕೃತಿ ಪತ್ರ ಪಡೆದು ಅವರ ಹೇಳಿಕೆಯನ್ನು ಸಹ ಪಡೆದೆ.

ದಿನಾಂಕಃ25/11/2017 ರಂದು ಧಾರವಾಡದ ತಜ್ಞರಿಂದ ಬಂದ ವರದಿಯನ್ನು ಪಡೆದೆ. ನನ್ನ ವರ್ಗಾವಣೆ ನಿಮಿತ್ತ ಕಡತವನ್ನು ಪುನಃ ಚಾಸಾ-20 ರಿಗೆ ವರ್ಗಾಯಿಸಿದೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಯು.ಎನ್.ಜಿ. ವಕೀಲರಿಂದಃ–**

*(ಸಂಜೆ 4.25 ಘಂಟೆ ಆಗಿರುವುದರಿಂದ ಹಾಗೂ ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.)*

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.